ಕೆ.ಎಸ್.ಟಿ.ಡಿ.ಸಿ.ಗೆ ಹಸ್ತಾಂತರಿಸಲಾಗಿದೆ. ಇಲ್ಲಿ ಇಲಾಖೆ ಪ್ರವಾಸಿ ಮಾಹಿತಿ ಕೇಂದ್ರವನ್ನು ತೆರೆದಿದೆ. ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ಇಲಾಖೆಯು ಕೋಟೆಯ ಜೀರ್ಣೋದ್ಧಾರ ಕಾರ್ಯವನ್ನು ತೆಗೆದುಕೊಳ್ಳಲು ಯೋಚಿಸಿದೆ.

ಶ್ರೀರಂಗಪಟ್ಟಣದ ಪ್ರಾಮುಖ್ಯತೆಯನ್ನು ಮನಗಂಡು ಇಲಾಖೆ ಈ ಬಗ್ಗೆ ವಿಶೇಷ ವರ್ಣರಂಜಿತ ಮಡಿಕೆಯನ್ನು ಹೊರತಂದಿದೆ. ಇದಲ್ಲದೆ ಮಂಡ್ಯ ಜಿಲ್ಲೆಯ ಬಗ್ಗೆ ಇಲಾಖೆ ಹೊರತಂದಿರುವ ವರ್ಣರಂಜಿತ ಮಡಿಕೆಯಲ್ಲೂ ಸಹ ಶ್ರೀರಂಗಪಟ್ಟಣದ ಬಗ್ಗೆ ಪ್ರವಾಸಿ ಮಾಹಿತಿ ನೀಡಲಾಗಿದೆ.

ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಶ್ರೀರಂಗಪ್ಪಟಣವನ್ನು 'ಸಿ' ಗುಂಪಿನಡಿ ಸೇರಿಸಲಾಗಿದ್ದು, ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಶೇ. 25 ಸಬ್ಸಿಡಿ ಹಾಗೂ ಇತರ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು.

ಶ್ರೀರಂಗಪಟ್ಟಣದ ದ್ವೀಪವನ್ನು ನೋಟಿಫೈಡ್ ಪ್ರದೇಶವೆಂದು ಘೋಷಿಸುವ ಪ್ರಶ್ನೆಯನ್ನು ಪರಿಶೀಲಿಸಲಾಗುವುದು.

4. ಉಡುಪಿ ತಾಲ್ಲೂಕು ಬ್ರಹ್ಮಾವರಮಂಡಲ ಪಂಚಾಯತಿ ಹಾಗೂ ವಾರಂಬಳ್ಳಿ ಮಂಡಲ ಪಂಚಾಯತಿಯನ್ನು ಸೇರಿಸಿ ಬ್ರಹ್ಮಾವರ ಪುರಸಭೆಯನ್ನಾಗಿ ಪರಿವರ್ತಿಸುವ ಬಗ್ಗೆ

ಶ್ರೀ ಪಿ. ಬಸವರಾಜ್:– (ಬ್ರಹ್ಮಾವರ) ಸನ್ಮಾನ್ಯ ಅಧ್ಯಕ್ಷರೆ, ಉಡುಪಿ ತಾಲ್ಲೂಕು ಬ್ರಹ್ಮಾವರ ಮಂಡಲ, ಪಂಚಾಯತ್ ವ್ಯವಸ್ಥೆಯು ಬರುವುದಕ್ಕಿಂತ ಮೊದಲು ಬ್ರಹ್ಮಾವರ ನಗರ ಪಂಚಾಯತಿ ಇತ್ತು. ಮಂಡಲ ಪಂಚಾಯತ್ ವ್ಯವಸ್ಥೆಯು ಬಂದ ಮೇಲೆ ಅದು ಬ್ರಹ್ಮಾವರ ಮಂಡಲ ಪಂಚಾಯತ್ ಮತ್ತು ವಾರಂಬಳ್ಳಿ ಮಂಡಲ ಪಂಚಾಯತ್ ಎಂದು ವಿಭಾಗಿಸಲ್ಪಟ್ಟಿತು. ಈಗ ಎರಡು ಮಂಡಲ ಪಂಚಾಯತ್‌ಗಳು ಕಾರ್ಯ ನಿರ್ವಹಿಸುತ್ತಿರುವುದರಿಂದ ಅಭಿವೃದ್ಧಿ ಕಾರ್ಯಗಳು ಅಷ್ಟು ಸಮರ್ಪಕವಾಗಿ ನಡೆಯಲು ಸಾಧ್ಯವಾಗುತ್ತಿಲ್ಲ. ಬ್ರಹ್ಮಾವರವು ಪುರಸಭೆಯನ್ನಾಗಿ ಪರಿವರ್ತಿಸಲು ನಿಯಮಾನುಸಾರವಾದ ಜನಸಂಖ್ಯೆಯನ್ನು ಕೂಡ ಹೊಂದಿದೆ. ಆದ್ದರಿಂದ ಈ ಪ್ರದೇಶದ ಪುರೋಭಿವೃದ್ಧಿಯನ್ನು ಸಾಧಿಸಲು ಮತ್ತು ಪುರಸಭೆಯ ಮೂಲಕ ಸಾರ್ವಜನಿಕ ಸೂಕ್ತ ಸೌಲಭ್ಯಗಳನ್ನು ಒದಗಿಸಲು ಅನುಕೂಲವಾಗುವಂತೆ ಬ್ರಹ್ಮಾವರ ಮತ್ತು ವಾರಂಬಳ್ಳಿ ಮಂಡಲ ಪಂಚಾಯತ್‌ಗಳನ್ನು ಸೇರಿಸಿ ಬ್ರಹ್ಮಾವರ ಪುರಸಭೆ (ಮುನಿಸಿಪಾಲಿಟಿ)ಯನ್ನು ಮಾಡಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರನ್ನು ವಿಜ್ಞಾಪಿಸಿಕೊಳ್ಳುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ :– (ಗಣಿ ಸಚಿವರು) (ನಗರಾಭಿವೃದ್ಧಿ ಸಚಿವರ ಪರವಾಗಿ)

1964ರ ಕರ್ನಾಟಕ ಪುರಸಭೆ ಕಾಯ್ದೆಯ ಅಡಿ ಜನಸಂಖ್ಯೆ 10,000ಕ್ಕಿಂತ ಹೆಚ್ಚಾಗಿದ್ದರೆ ಪುರಸಭೆ ಮಾಡಲು ಅವಕಾಶವಿದೆ. ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪ್ರಥಮವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಬಂದು ಆ ಇಲಾಖೆಯು ಬ್ರಹ್ಮಾವರ ಮತ್ತು ವಾರಂಬಳ್ಳಿ ಮಂಡಲಗಳನ್ನು ಸೇರಿಸಿ ಬ್ರಹ್ಮಾವರ ಪುರಸಭೆ ಮಾಡುವ ವಿಷಯದಲ್ಲಿ ಅಡಳಿತಾತ್ಮಕ ನಿರ್ಣಯ ತೆಗೆದುಕೊಳ್ಳಬೇಕಾಗುವುದು. ಅದುದರಿಂದ ಇನ್ನೂ ಈ ಬಗ್ಗೆ ಪ್ರಸ್ತಾವನೆಯು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಬಂದಿರುವುದಿಲ್ಲ. ಒಂದು ವೇಳೆ ಬಂದರೆ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.